ಅಧ್ಯಕ್ಷರು : ಹೀಗೆ ಮಾಡೋಣ, ನಿಯಮ, 69ರ ಕೆಳಗೆ ಬೈವಾಟರ್ ಮೊದಲು ತೆಗೆದುಕೊಂಡು ಅದನ್ನು ಮುಗಿಸಿ ಆಮೇಲೆ ಅದನ್ನು ತೆಗೆದುಕೊಂಡು ಆಮೇಲೆ ಸಿಎಂ ಅವರ ಉತ್ತರ ತೆಗೆದುಕೊಳ್ಳೋಣ. ಈಗ ವಿವಾದವಲ್ಲದ ಬಿಲ್‌ಗಳನ್ನು ತೆಗೆದುಕೊಳ್ಳೋಣ.

ವಿಷಯ : (ಅ) ಕರ್ನಾಟಕ ಗೃಹ ಮಂಡಳಿ ವಿಧೇಯಕದ ಬಗ್ಗೆ

ಶ್ರೀ ಎಂ ಪಿ ಪ್ರಕಾಶ್ : ಹೌಸಿಂಗ್ ಬೋರ್ಡ್ ಬಿಲ್ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏಕೆ ಸಚಿವರು ಎಲ್ಲಿ ಹೋಗಿದ್ದಾರೆ.?

ಶ್ರೀ ಎಂ ಪಿ ಪ್ರಕಾಶ್ : ಇಲ್ಲ, ಬೇರೆ ಕೆಲಸದ ಮೇಲೆ ಅವರು ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಏನು ಹೇಳಿದ್ದಿರಿ, ಅವರ ಸಬ್ಜೆಕ್ಟ್ ಇದ್ದಾಗ ಅವರು ಬರಲಿಲ್ಲ ಅಂದರೆ ನನಗೆ ಕೇಳುವ ಹಕ್ಕಿದೆ. ಕೇಳುತ್ತೇನೆ. ಈಗ ಗೃಹಮಂಡಲೀದು ಬಂದಿದೆ, ಹೌಸಿಂಗ್ ಮಿನಿಸ್ಟರ್ ಎಲ್ಲಿ ?

ಶ್ರೀ ಎಂ ಪಿ ಪ್ರಕಾಶ್ : ಇದು ಬಹಳ ಸಿಂಪಾಲ್ಲಾಗಿರುವ ಬಿಲ್, ಸಚಿವರು ಬೇರೆ ಏನೋ ಕಾರ್ಯನಿಮಿತ್ತವಾಗಿ ಹೋಗಿದ್ದಾರೆ.

ಅಧ್ಯಕ್ಷರು : ಪ್ರಕಾಶರವರೇ ಅವರು ಕೇಳುತ್ತಾರೆ ಎಂದು ಔಪಚಾರಿಕವಾಗಿ ನಾವು ಹೇಳೋದಲ್ಲ ಮುಖ್ಯಮಂತ್ರಿಗಳು ಅನೇಕ ಪೋರಂಗಳಲ್ಲಿ ಅನೇಕ ಸಲ ಹೇಳಿದ್ದಾರೆ. ಪೊಲಿಟಿಕಲ್ ಎಕ್ಸಾಪಿಡೆಯೆನ್ಸಿಗೆ ಏನೇನೆಲ್ಲಾ ಮಾಡುತ್ತಿದ್ದೇವೆ ಎಂದು ನಾವು ಸಂಸದೀಯ ನಡವಳಿಕೆಗಳಿಗಿರುವ ಘನತೆಯನ್ನೇ ತಗ್ಗಿಸಿಬಿಡುತ್ತಿದ್ದೇವೆ. that is where I am pained, After all, you know the history. For a period of seven centuries, this struggle went on in Great Britain and ultimately to land up here into this stage. It is almost 7-8 centuries, ನೋಡಿ, ಅವರ ಬಿಲ್ ಬರುತ್ತದೆ ಅವರು ಇರುವುದಿಲ್ಲ. ನಮಗೂ ಹೇಳುವುದಿಲ್ಲ.

ಶ್ರೀಮಲ್ಲಿಕಾರ್ಜುನ ಖರ್ಗೆ : ಆದರೂ ನೀವು ಅವರಿಗೆ ಚೀಮಾರಿ ಹಾಕುವುದಿಲ್ಲ, ನೋಡೋಣ ಕಡೇ ದಿವಸ ಇವತ್ತು, ಹಾಕಿ, ಒಂದು ಸಾರಿ ಹಾಕಿ ಸಾರ್ ನೋಡೋಣ.

ಅಧ್ಯಕ್ಷರು: ಊಟ ಮಾಡಿ ಬಂದು ಹಾಕುತ್ತೇನೆ, ಸುಮ್ಮನಿರಿ.

7. ಶಾಸನ ರಚನಾ ಕಾರ್ಯಕಲಾಪಗಳು

ಪರ್ಯಾಲೋಚನಾ ಪ್ರಸ್ತಾವ

(ಅ) ಮೈಸೂರು ತಂಬಾಕು ಕಂಪನಿ (ಷೇರುಗಳ ಆರ್ಜನೆ)ವಿಧೇಯಕ, 1998

ಶ್ರೀ ಸಿ ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ಅಧ್ಯಕ್ಷರೇ ವಿಧಾನಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿ 1998ರ ಮೈಸೂರು ತಂಬಾಕು ಕಂಪೆನಿ (ಷೇರುಗಳ ಆರ್ಜನೆ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಸಿ ಭೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ಅಧ್ಯಕ್ಷರೇ 1937ರಲ್ಲಿ ರೈತರು ಬೆಳೆಯುತ್ತಿದ್ದ ಹೊಗೆಸೊಪ್ಪಿಗೆ ಉತ್ತಮವಾದ ಮಾರುಕಟ್ಟೆಯನ್ನು ಒದಗಿಸಬೇಕೆಂಬ ಒಂದು ಕಂಪೆನಿಯನ್ನು ಅಂದಿನ ಸರ್ಕಾರ ಶೇಕಡ 10ರಷ್ಟು ಪಾಲುಬಂಡವಾಳದೊಂದಿಗೆ ಉಳಿದ ಷೇರುಗಳನ್ನು ಖಾಸಗಿಯವರಿಗೆ ಕೊಟ್ಟು ಸ್ಥಾಪನೆ ಮಾಡಿದರು. ಅದಾದನಂತರ 1970ರ ದಶಕದಲ್ಲಿ ಟೊಬ್ಯಾಕೊ ಬೋರ್ಡ್ ಜಾರಿಗೆ ಬಂತು. ಅದರ ಜಾರಿಗೆ ಬಂದಮೇಲೆ ವ್ಯವಸ್ಥಿತ ಮಾರುಕಟ್ಟೆ ಒದಗಿಸುವ ಕೆಲಸ, ಆಕ್ಷನ್ ಪ್ಲಾಟ್‌ಫಾರ್ಮ್ ಮಾಡಿದ್ದರು. ಅದರಿಂದೇನು ಕಂಪೆನಿ ಹೆಚ್ಚಿನ ವಹಿವಾಟು ನಡೆಸಲು ಸಾಧ್ಯವಾಗಲಿಲ್ಲ. ಅಲ್ಲಿಂದೀಚೆಗೆ ನಷ್ಟ ಅನುಭವಿಸುತ್ತಾ ಬಂದಿದೆ. ಇದರಿಂದ ಈ ಕಂಪೆನಿಯನ್ನು ಲಿಕ್ವಿಡೇಟ್ ಮಾಡಬೇಕೆಂದು ಹಿಂದೇನೇ ತೀರ್ಮಾನ ಆಗಿದೆ. ಲಿಕ್ವಿಡೇಟರ್ ಕೂಡ ನೇಮಕವಾಗಿದ್ದಾರೆ. ಆ ಕಂಪೆನಿಗೆ ಸುಮಾರು 10-12 ಕೋಟಿಯ ಸ್ಥಿರ ಆಸ್ತಿ ಇದೆ. ಬೆಂಗಳೂರಿನ ರಿಚ್‌ಮಂಡ್ ರಸ್ತೆಯಲ್ಲಿ ದೊಡ್ಡ ಆಸ್ತಿ ಇದೆ. ವೈಟೆಫೀಲ್ಡ್‌ನಲ್ಲೂ ಭೂಮಿ ಇದೆ. ಇವುಗಳ ವ್ಯಾಲ್ಯೂವನ್ನು ಇತ್ತೀಚಿನ ಮಾರುಕಟ್ಟೆ ದರದಲ್ಲಿ ಅಪೀಷಿಯೇಟ್ ಆಗಿದೆ. ಇದರಲ್ಲಿ ಖಾಸಗಿಯವರು 1708 ಷೇರುದಾರರಿದ್ದು 58 100 ಷೇರುಗಳಿವೆ 10 ರೂ ಮೌಲ್ಯದ್ದು. ಇದನ್ನು ನಾವು ವಶಪಡಿಸಿಕೊಂಡರೆ ಕಂಪೆನಿ ಪೂರ್ತಿ ಸರ್ಕಾರದ್ದಾಗುತ್ತದೆ. ಆಗ ಅದನ್ನು ಯಾವರೀತಿ ಬೇಕಾದರೂ ಬಳಸಿಕೊಳ್ಳಲು ಸಾಧ್ಯವಿದೆ. 10ರೂಗಳ ಒಂದು ಷೇರಿಗೆ 25ರೂ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮಾರುಕಟ್ಟೆಯ ಅಪ್ರೈಸರ್ ಹತ್ತಿರ ಅಪ್ರೈಸ್ ಕೂಡ ಮಾಡಿಸಿ ಆ ಪ್ರಕಾರ ಒಂದು ಷೇರು 205 ರೂ ಆಗುತ್ತದೆ. 205 ರೂ ಬಾಳುತ್ತಿರುವ ಷೇರನ್ನು ತಲಾ 25ರೂ ಕೊಟ್ಟು ಸ್ವಾಧೀನಪಡಿಸಿಕೊಳ್ಳಬೇಕೆಂದು, ಸುಮಾರು 10 ಕೋಟಿ ರೂ ಬೆಲೆಬಾಳುವ ಆಸ್ತಿಯನ್ನು ರಕ್ಷಣೆ ಮಾಡಬೇಕೆಂಬ ಕಾರಣದಿಂದ ಈ ಮಸೂದೆಯನ್ನು ತಂದಿದ್ದೇವೆ.

1.40 ಪಿ. ಎಂ.

ಖಾಸಗಿಯವರು ಹೊಂದಿರುವ ಶೇರುಗಳನ್ನು ನಾವು ವಶಪಡಿಸಿಕೊಳ್ಳಬೇಕೆಂದು ಮಸೂದೆಯನ್ನು ತಂದಿದ್ದೇವೆ. ಇದು ಸರ್ಕಾರಕ್ಕೆ ಮತ್ತು ಸಾರ್ವಜನಿಕ ಸಂಸ್ಥೆಗೆ ಲಾಭದಾಯಕವಾಗಿರುವ ಕಾರಣದಿಂದ ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ಮಾನ್ಯಸಭೆಯಲ್ಲಿ ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಇದನ್ನು ವಯಬಲ್ ಮಾಡುವುದಕೋಸ್ಕರ ಮತ್ತು ಸಂಪೂರ್ಣವಾಗಿ ಗೌರ್ನಮೆಂಟ್ ಕಂಪನಿಯನ್ನಾಗಿ ಮಾಡಿಕೊಳ್ಳಬೇಕು ಎಂದು ಹೇಳಿ ತಾವು ಖಾಸಗಿಯವರ ಶೇರುಗಳನ್ನೂ ಕೂಡ ಪರ್ಚೇಸ್ ಮಾಡುತ್ತೇವೆ ಎಂದು ಹೇಳಿದಿರಿ. ಒಂದು ಕಡೆ ಪಬ್ಲಿಕ್ ಸೆಕ್ಟಾರ್‌ಗಳು ಲಾಸ್‌ನಲ್ಲಿ ನಡೆದಿವೆ ಎಂದು ಹೇಳಿ ನಿಮ್ಮದೇ ಶೇರುಗಳನ್ನು ಮಾರಿಕೊಂಡು ಪ್ರೈವೇಟೈಜೇಷನ್ ಮಾಡಬೇಕೆಂದು ನೀತಿಯನ್ನು ಒಂದುಕಡೆ ಹೇಳುತ್ತೀರಿ. ಇದಕ್ಕೆ ಮಾತ್ರ ನಾವು ಖಾಸಗಿಯವರ ಶೇರುಗಳನ್ನೆಲ್ಲಾ ಪರ್ಚೇಸ್ ಮಾಡುತ್ತೇವೆ. ಏಕೆಂದರೆ 205 ರೂಪಾಯಿಗೆ ಒಂದು ಶೇರಾಗಿದೆ. 25 ರೂಪಾಯಿಗೆ ಒಂದು ಶೇರನ್ನು ಪಡೆದುಕೊಂಡರೆ ಇವತ್ತು ನಮಗೆ ಲಾಭವಾಗುತ್ತದೆ ಎನ್ನುವುದನ್ನೂ ಹೇಳುತ್ತೀರಿ. ಮೂರನೆಯದು ಏನೆಂದರೆ ತಂಬಾಕು ಬೆಳೆಗಾರರನ್ನು

ನೋಡುವವರು ಯಾರೂ ಇಲ್ಲ. ಪರ್ಚೇಸ್ ಮಾಡುವ ಸರ್ಕಾರದ ನೀತಿ ತಮ್ಮ ದೃಢವಾದ ನೀತಿಯಿಲ್ಲದ ಕಾರಣ ಇವರು ತಂಬಾಕು ಬೆಳೆಗಾರರು ತೊಂದರೆಯಲ್ಲಿದ್ದಾರೆ. ಅದಕ್ಕೆ ರಾಮಕೃಷ್ಣ ಹೆಗಡೆಯವರು ಹೋಗಿ ಒಂದು ಭರವಸೆಯನ್ನು ಕೊಟ್ಟರು. ನಾವು ಆ ತಂಬಾಕು ಬೆಳೆಗಾರರಿಗೆ ಒಂದು ನಿಗದಿತವಾದ ಬೆಲೆಯನ್ನು ಕೊಡುತ್ತೇವೆ. ಆ ಒಂದು ಪ್ರೈಸ್ ಫಿಕ್ಸೇಷನ್ ಮಾಡಿ ಪರ್ಚೇಸ್ ಮಾಡುತ್ತೇವೆ ಎಂದು ಅವರೂ ಕೂಡ ಹೇಳಿದರು. ಅದರ ಭರವಸೆಯ ಮೇಲೆ ತಾವೂ ಕೂಡ ಮಾನ್ಯ ಉಪಮುಖ್ಯಮಂತ್ರಿಗಳೂ ಕೂಡ ಹೇಳಿದರು. ಯಾರು ಲೈಸೆನ್ಸ್ ಇಲ್ಲದೆ ತಂಬಾಕನ್ನು ಬೆಳೆಯುತ್ತಿದ್ದಾರೆ, ಅದಕ್ಕಾಗಿ ಈ ರೀತಿ ತೊಂದರೆಯಾಗಿದೆ. ಇದನ್ನು ಯಾವ ರೀತಿಯಾಗಿ ಬಗೆಹರಿಸಬೇಕು ಎನ್ನುವ ಬಗ್ಗೆ ಮಾನ್ಯ ರಾಮಕೃಷ್ಣ ಹೆಗಡೆಯವರ ಜೊತೆಯಲ್ಲಿ ಮಾತುಕತೆ ನಡೆಸಿ ಇದಕ್ಕೆ ಪರಿಹಾರವನ್ನು ಹುಡುಕುತ್ತೇವೆ ಎನ್ನುವ ಮಾತನ್ನು ಹೇಳಿದರು. ಅದಕ್ಕಾಗಿ ಈಗ ಈ ಕಂಪನಿ ಇವತ್ತು ನಷ್ಟದಲ್ಲಿರುವ ಕಾರಣ ಯಾವ ರೀತಿಯಿಂದ ಆ ಬೆಳೆಗಾರರಿಗೆ ಸಹಾಯ ಮಾಡುವ ವ್ಯವಸ್ಥೆಮಾಡುತ್ತೀರಿ? ಎರಡನೆಯದು ಈ ಶೇರುಗಳನ್ನು ಪರ್ಚೇಸ್ ಮಾಡುವುದಕ್ಕೆ ತಾವು ಹಣವನ್ನು ಎಲ್ಲಿಂದ ಸಂಗ್ರಹಿಸುತ್ತೀರಿ? ಮೂರನೆಯದು ಬಜೆಟ್‌ನಲ್ಲಿ ಇದಕ್ಕೇನಾದರೂ ಪ್ರಾವಿಷನನ್ನು ಮಾಡಿಕೊಂಡಿದ್ದೀರೋ ಹೇಗೆ ಎಂಬುದನ್ನು ಹೇಳಬೇಕು.

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ) : ಮಾನ್ಯ ಅಧ್ಯಕ್ಷರೇ, ಈ ಕಂಪನಿ 1975 ರಿಂದ ಈಚೆಗೆ ವ್ಯವಹಾರವನ್ನು ಮಾಡುತ್ತಿಲ್ಲ. ಆದಕ್ಕಿಂತ ಹಿಂದೆ ನಷ್ಟವನ್ನು ಅನುಭವಿಸುತ್ತಿತ್ತು. ಆ ಕಾರಣದಿಂದ ನಷ್ಟಅನುಭವಿಸಿ ವ್ಯವಹಾರವನ್ನು ಮಾಡದೇ ಇರುವ ಕಾರಣದಿಂದಲೇ ಇದನ್ನು ಲಿಕ್ವಿಡೇಟ್ ಮಾಡಬೇಕು ಎಂದಾಯಿತು. ಲಿಕ್ವಿಡೇಟ್ ಮಾಡಬೇಕೆಂದರೆ ಲಿಕ್ವಿಡೇಟರ್ ಎಲ್ಲಾ ಅಸೆಟ್ಸ್ ಅಂಡ್ ಲಯಾಬಿಲಿಟೀಸ್‌ನ್ನು ಲೆಕ್ಕಹಾಕಿದರೆ ಆ ಕಾಲದಲ್ಲಿ ಇದು ಮೈನಸ್ ಇತ್ತು. ಆಗಲೇ ನಾನು ಹೇಳಿದ ಹಾಗೆ ಅರ್ಬನ್ ಪ್ರಾಪರ್ಟಿ ಅಪೀಷಿಯೇಟ್ ಆಗಿರುವ ಕಾರಣದಿಂದ ಇವತ್ತು ಸುಮಾರು ಅದು ಹತ್ತು ಕೋಟಿ ರೂ.ವರೆಗೂ ಬೆಲೆ ಬಾಳುವ ಆಸ್ತಿ ಇವತ್ತಿನ ದಿವಸ ಇದೆ. ಮುಖ್ಯವಾದ ಸ್ಥಳದಲ್ಲಿ ರಿಚ್ಮಂಡ್ ರೋಡಿನಲ್ಲಿ ದೊಡ್ಡ ಆಸ್ತಿ ಇದೆ. ಮತ್ತೆ ವೈಟ್‌ಫೀಲ್ಡ್‌ನಲ್ಲೂ ಕೂಡ 10-11 ಎಕರೆ ಜಮೀನು ಕೂಡ ಇದೆ. ಇದನ್ನು ಹಾಗೆಯೇ ಬಿಟ್ಟಿದ್ದಿದ್ದರೆ ಅರ್ಬನ್ ಪ್ರಾಪರ್ಟಿ ಅಪೀಷಿಯೇಟ್ ಆಗದೇ ಇದ್ದರೆ ನಷ್ಟದಲ್ಲಿರುತ್ತಿತ್ತು. ಈಗ ಷೇರೂ ಕೂಡ ಅಪೀಷಿಯೇಟ್ ಆಗಿರುವುದು ಅದೇ ಕಾರಣದಿಂದ. ಅರ್ಬನ್ ಪ್ರಾಪರ್ಟಿ ವ್ಯಾಲ್ಯು ಅಪೀಷಿಯೇಟ್ ಆಗಿರುವ ಕಾರಣದಿಂದಲೇ ನಾವು ಲಿಕ್ವಿಟೇಟರ್‌ಗೆ ಕೊಟ್ಟರೆ ಅವರು ಕಾನೂನು ಪ್ರಕಾರ ಹೋದರೆ ಸರ್ಕಾರಕ್ಕೆ ನಷ್ಟವಾಗುತ್ತದೆ. ಖಾಸಗಿಯವರ ಶೇರುಗಳನ್ನು ನಾವು ವಶಪಡಿಸಿಕೊಳ್ಳುವುದರಿಂದ ಅದು 205 ರೂಪಾಯಿ ಬೆಲೆಬಾಳುವ ಶೇರನ್ನು 25 ರೂ. ಗೆ ವಶಪಡಿಸಿಕೊಳ್ಳುವುದರಿಂದ ಸರ್ಕಾರಕ್ಕೆ ಲಾಭವಾಗುತ್ತದೆ. ಇದನ್ನು ಆ ದೃಷ್ಟಿಯಲ್ಲಿಟ್ಟುಕೊಂಡು ಕಾನೂನನ್ನು ತಂದಿದ್ದೇನೆ. ಮತ್ತೆ ಈಗ ಇರುವ ಈ ಸಾರಿ ಬೆಳೆದಿರುವ ಹೊಗೆಸೊಪ್ಪಿನ ಬೆಳೆಗಾರರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾನು ಸುಮಾರು ಎರಡು ಸಾರಿ ಬೆಂಗಳೂರಿನಲ್ಲಿ ಒಂದು ಸಾರಿ ಮತ್ತೆ ದೆಹಲಿಗೆ ಒಂದು ಸಾರಿ ಹೋಗಿ ಮಾನ್ಯ ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರನ್ನು ಭೇಟಿಯಾಗಿ ನಮ್ಮ ರಾಜ್ಯದಲ್ಲಿ ಹೊಗೆಸೊಪ್ಪು ಬೆಳಗಾರರ ಬಗ್ಗೆ ಇರುವ ಸಮಸ್ಯೆಗಳನ್ನು ಹೇಳಿದ್ದೇನೆ. ಇವತ್ತು ಪ್ರಪಂಚದಲ್ಲಿಯೇ ಈ ಹೊಗೆಸೊಪ್ಪಿನ

ಬೆಲೆ ಕುಸಿದಿರುವುದು ಮತ್ತು ಬೇರೆ ಬೇರೆ ರಾಷ್ಟ್ರಗಳಲ್ಲೂ ಕೂಡ ಯಾವ ಯಾವ ರಾಷ್ಟ್ರಗಳು ನಮ್ಮ ದೇಶದಿಂದ ಹೊಗೆಸೊಪ್ಪನ್ನು ಕೊಂಡುಕೊಳ್ಳುತ್ತಿದ್ದವು, ಆ ರಾಷ್ಟ್ರಗಳಲ್ಲೂ ಕೂಡ ಇವತ್ತು ಬೇಡಿಕೆ ಇದೆ. ಮುಖ್ಯವಾದ ರಷ್ಯಾ ದೇಶದಲ್ಲಿ ನಮ್ಮ ಹೊಗೆಸೊಪ್ಪಿಗೆ ಹೆಚ್ಚಿನ ಬೇಡಿಕೆ ಇತ್ತು. ಇವತ್ತಿನ ದಿವಸ ಯು. ಎಸ್. ಎಸ್. ಆರ್ ಇಲ್ಲ ರಷ್ಯಾ ಮತ್ತು ಇತರ ದೇಶಗಳು ಎಷ್ಟು ಚೂರು ಚೂರಾಗಿದೆ ಎಂಬುದು ಗೊತ್ತು. ಮುಖ್ಯವಾಗಿ ಆ ಮಾರುಕಟ್ಟೆಯಲ್ಲಿ ಇವತ್ತಿನ ದಿವಸ ಈ ಹೊಗೆಸೊಪ್ಪಿಗೆ ಬೇಡಿಕೆ ಇಲ್ಲದೇ ಇರುವ ಕಾರಣದಿಂದ ಇವತ್ತು ಇಲ್ಲಿರುವ ವ್ಯಾಪಾರಸ್ಥರೂ ಕೂಡ ಹೊಗೆಸೊಪ್ಪನ್ನು ಕೊಂಡುಕೊಳ್ಳುವುದಕ್ಕೆ ಮುಂದೆ ಬರಲಿಲ್ಲ. ಈ ವಿಚಾರವನ್ನು ನಾವು ಎರಡು ಸಾರಿ ಪ್ರಸ್ತಾಪಮಾಡಿದ್ದೇವೆ. ಮತ್ತು ಮೂರು ದಿವಸದ ಹಿಂದೆ ನಾನು ದೂರವಾಣಿಯಲ್ಲೂ ಕೂಡ ಮಾನ್ಯ ರಾಮಕೃಷ್ಣಹೆಗಡೆಯವರ ಹತ್ತಿರ ಮಾತನಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ನಾನು ವಿನಂತಿ ಮಾಡಿದ್ದೇನೆ. ನಿನ್ನೆ ದಿವಸಕ್ಕೆ ಹರಾಜನ್ನು ನಿಲ್ಲಿಸುತ್ತೇವೆ ಎಂದು ಟೊಬ್ಯಾಕೊ ಮಂಡಳಿಯವರು ಅವರೊಂದು ಪ್ರಚಾರವನ್ನು ಮಾಡಿದ್ದರು. ಅದನ್ನು ಕನಿಷ್ಪ ಒಂದು ತಿಂಗಳಾದರೂ ಕೂಡ ಮುಂದುವರೆಸಿಕೊಂಡು ಹೋಗಬೇಕು ಎಂದು ಹೇಳಿದ್ದೇನೆ. ಮತ್ತೆ ಅದರಲ್ಲಿ ಎರಡು ತರಹ ಇದೆ. ಒಂದು ಪರ್ಮಿಟ್ ಹೋಲ್ಡರ್ಸ್. ಆ ಮಿತಿಯಲ್ಲಿ ಹೊಗೆಸೊಪ್ಪನ್ನು ಬೆಳೆದಿರುವವರು ಕೆಲವರು ಇದ್ದಾರೆ. ಏನೂ ಇಲ್ಲದೆಯೇ ಪರ್ಮಿಟ್ ಇಲ್ಲದೆ ಬೆಳೆದಿರುವವರು ಕೂಡ ಇದ್ದಾರೆ. ಪರ್ಮಿಟ್ ತೆಗೆದುಕೊಂಡು ಯಾರು ಹೊಗೆಸೊಪ್ಪನ್ನು ಬೆಳೆದಿರುತ್ತಾರೆ, ಅದನ್ನು ವ್ಯಾಪಾರ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ ಎಂದು ಹೇಳಿರತಕ್ಕಂಥದ್ದು. ಮತ್ತೆ ನಾನು ಪರ್ಮಿಟ್ ಇಲ್ಲದೆ ಬೆಳೆದಿರುವವರು ಅವರದು ಅಗಾಧವಾಗಿರುವ ಹೊಗೆಸೊಪ್ಪ ನಮ್ಮಲ್ಲಿ ಉಳಿದಿದೆ. ಸುಮಾರು 50 ರಿಂದ 60 ಕೋಟಿ ರೂಪಾಯಿ ಬೆಲೆಬಾಳುವ ಹೊಗೆಸೊಪ್ಪ ಇವತ್ತು ಉಳಿದುಕೊಂಡಿದೆ. ಇದಕ್ಕೆ ಏನಾದರೂ ಮಾಡಿ ಬೆಲೆಯನ್ನು ತರಿಸಿಕೊಡಬೇಕೆಂದು ಮನವಿಯನ್ನು ನಾನು ಅವರ ಹತ್ತಿರ ಮಾಡಿದ್ದೇನೆ. ಅವರು 15 ದಿವಸದ ಮಟ್ಟಿಗೆ ಹರಾಜಿನ ಅವಧಿಯನ್ನು ವಿಸ್ತಾರ ಮಾಡುತ್ತೇವೆ ಎಂದು ಅವರು ಭರವಸೆಯನ್ನು ಕೊಟ್ಟಿದ್ದಾರೆ. 15 ದಿವಸ ಸಾಕಾಗುವುದಿಲ್ಲ. ಕನಿಷ್ಪ ಒಂದು ತಿಂಗಳಾದರೂ ಕೂಡ ಈ ಅವಧಿಯನ್ನು ವಿಸ್ತರಣೆ ಮಾಡಬೇಕಾಗುತ್ತದೆ ಎನ್ನುವ ಮನವಿಯನ್ನೂ ಕೂಡ ಅವರಲ್ಲಿ ಮಾಡಿದ್ದೇವೆ. ಆ ಪ್ರಯತ್ನದಲ್ಲಿ ನಮ್ಮ ರಾಜ್ಯದಲ್ಲಿರುವ ಹೊಗೆಸೊಪ್ಪಿನ ಬೆಳೆಗಾರರಿಗೆ ಅವರು ಈ ವರ್ಷ ಬೆಳೆದಿರುವ ಹೊಗೆಸೊಪ್ಪನ್ನು ಅವರಿಗೆ ಏನಾದರೂ ಮಾಡಿ ಅವರಿಗೆ ಬೆಲೆಯನ್ನು ತರಿಸಿಕೊಡಬೇಕು ಎನ್ನುವುದಕ್ಕೆ ಸರ್ಕಾರ ಎಲ್ಲಾ ಪ್ರಯತ್ನವನ್ನು ನಡೆಸಿದೆ ಎನ್ನುವ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದಕ್ಕೆ ಇಚ್ಚಿಸುತ್ತೇನೆ. ಮತ್ತು ಇದು ಏಕೆ ಈ ರೀತಿಯಾಗುತ್ತಿದೆ ಎಂದರೆ ಅದು ಟೊಬ್ಯಾಕೊ ಬೋರ್ಡ್ ಆಕ್ಟ್ ಪ್ರಕಾರ ಅದನ್ನು ಬೆಳೆಸುವಂಥದ್ದು ಮತ್ತು ಮಾರುಕಟ್ಟೆ ಮಟ್ಟಕ್ಕೆ ಒದಗಿಸುವುದು ಇದೆಲ್ಲವೂ ಟೊಬ್ಯಾಕೊ ಬೋರ್ಡಿಗೆ ಸಂಬಂಧಪಡುತ್ತದೆ. ಆ ಆಕ್ಟಿವಿಟಿ ಎಲ್ಲವೂ ಕೂಡ ಅವರಿಗೆ ಸಂಬಂಧಪಟ್ಟಿರುವ ವಿಚಾರ. ಆದರೆ ನಾನಾ ಕಾರಣಗಳಿಂದ ಅದಕ್ಕೆ ಪರ್ಮಿಟ್ ಕೊಡುವ ಕೆಲವು ಸಂದರ್ಭಗಳಲ್ಲಿ ಸಿಕ್ಕಾಪಟ್ಟೆ ಪರ್ಮಿಟ್ ಕೊಟ್ಟಿರುವುದು. ಪರ್ಮಿಟ್ ಇಲ್ಲದೆ ಬೆಳೆದಿರುವವರನ್ನೂ ಕೂಡ ಆ ರೀತಿಯಾದ ರೈತರಿಗೆ ಒಂದು ರೀತಿಯಾದಂಥ ಪರೋಕ್ಷವಾಗಿ ಪ್ರೋತ್ಸಾಹವನ್ನು ನೀಡಿರುವ ಕಾರಣದಿಂದ ಇವತ್ತು ಹೆಚ್ಚಿನ

ಹೊಗೆಸೊಪ್ಪು ಉತ್ಪಾದನೆಯಾಗಿದೆ. ಕಳೆದ ವರ್ಷಗಳಲ್ಲೂ ಕೂಡ ಈ ರೀತಿಯಾಗಿ ಬೆಳೆದ ಹೊಗೆಸೊಪ್ಪನ್ನು ಕೊಂಡುಕೊಳ್ಳುವುದಕ್ಕೂ ಕೂಡ ಟೊಬ್ಯಾಕೊ ಮಂಡಳಿಯವರು ಅದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಈ ಎಲ್ಲಾ ಕಾರಣಗಳಿಂದ ಹೊಗೆಸೊಪ್ಪು ಇವತ್ತು ಉತ್ಪಾದನೆಯಾಗಿದೆ. ಆದ್ದರಿಂದ ಈ ವರ್ಷ ಕೇಂದ್ರ ಸರ್ಕಾರ ಕೂಡ ವಿಶ್ವ ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆ ಇರುವುದರಿಂದ ಯಾರಲ್ಲೂ ಕೂಡ ದೇಶಗಳ ಮೇಲೆ ನೀವು ಕೊಂಡುಕೊಳ್ಳಲೇಬೇಕು ಎಂದು ನಿರ್ಬಂಧ ಹಾಕುವುದು ಕಷ್ಟ ಇದೆ. ಈ ಪರಿಸ್ಥಿತಿ ಇದೆ. ಆದರೂ ಕೂಡ ಎಲ್ಲಾ ಪ್ರಯತ್ನವನ್ನು ಮಾಡಬೇಕೆಂದು ನಾವು ಮನವಿ ಮಾಡಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ರಾಜ್ಯದ ತಂಬಾಕು ಬೆಳಗಾರರ ರೈತರ ದುಸ್ಥಿತಿ ಹೇಗಿದೆ ಎಂದರೆ ನೀವು ಹೆಚ್ಚಿನ ಬೆಲೆ ಕೊಡಿಸಿ ಎಂದು ಕೇಳುವ ಮಟ್ಟಕ್ಕೆ ಇವತ್ತು ಇಲ್ಲ. ಬೆಳೆದಿರುವ ಹೊಗೆಸೊಪ್ಪನ್ನು ಮಾರಾಟ ಮಾಡಲಿಕ್ಕೆ ಅವಕಾಶ ಮಾಡಿ ಎಂದು ಹೇಳುತ್ತಿದ್ದಾರೆ. ಅಲ್ಲಿ ಎರಡು ಭಾಗ ಇದೆ. ಒಂದು ಅಧಿಕೃತ ಬೆಳೆಗಾರರು ಸಾಲ ತೆಗೆದುಕೊಂಡು ಲೈಸೆನ್ಸ್ ತೆಗೆದುಕೊಂಡು ಮನೆ ಕಟ್ಟಿರುವವರು. ಇನ್ನು ಕೆಲವರು ಎರಡನೇ ಭಾಗ ಅವರೇ ಸ್ವತಃ ದುಡ್ಡು ಹಾಕಿ ಮನೆ ಕಟ್ಟಿಕೊಂಡು ಬೆಳೆದಿದ್ದಾರೆ. ಅವರಿಗೆ ಮಾರಾಟ ಮಾಡಲಿಕ್ಕೆ ಲೈಸೆನ್ಸ್ ಸಿಕ್ಕಿಲ್ಲ. ಹಿಂದಿನ ವರ್ಷಗಳಲ್ಲಿ ಕಾರ್ಡುಗಳನ್ನು ಕೊಟ್ಟಿದ್ದರು. ಆ ಕಾರ್ಡ್ ಮೂಲಕ ಮಾಡುತ್ತಿದ್ದರು. ಈ ವರ್ಷ ಕಾರ್ಡ್‌ಗಳನ್ನು ಕೊಡದೇ ಆ ರೈತರು ಹೊಗೆಸೊಪ್ಪನ್ನು ಮಾರಾಟ ಮಾಡಲಿಕ್ಕೆ ಆಗಿಲ್ಲ. ಅಂಥ ಒಂದು ಧಾರುಣ ಸ್ಥಿತಿ ಆ ರೈತರಿಗೆ ಒದಗಿದೆ. ಅದಕ್ಕಾಗಿ ಅವರು ಬೆಳೆದಿರುವ ಹೊಗೆಸೊಪ್ಪನ್ನು ಮಾರಾಟ ಮಾಡಲಿಕ್ಕೆ ನೀವು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ. ಇನ್ನು ಇದಕ್ಕಿಂತಲೂ ಕನಿಷ್ಟ ಇನ್ನೇನು ಕೇಳಬೇಕು ಹೇಳಿ. ಅವರು ಬೆಳೆದಿರುವ ಹೊಗೆಸೊಪ್ಪನ್ನು ಮಾರಾಟ ಮಾಡುಲಿಕ್ಕಾಗಲಿಲ್ಲ ಎಂದರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾತನಾಡುತ್ತಾ ಹೇಳಿದರು ಕಾನೂನು ಪ್ರಕಾರ ಹೋದರೆ ಅವರ ಶೇರಿಗೆ 205 ರೂಪಾಯಿ ವ್ಯಾಲ್ಯು ಆಗುತ್ತದೆ ಎಂದು. ತಾವು ಸರ್ಕಾರ, ಕಾನೂನು ಮಾಡಿರುವವರು. ಕಾನೂನು ಪ್ರಕಾರ ಕೊಡಬೇಕಾಗಿರುವುದನ್ನು ಆಕ್ಟ್ ತಂದು 25 ರೂ. ಗೆ ರೆಸ್ಟ್ರಿಕ್ಟ್ ಮಾಡುತ್ತೇವೆ ಎಂದು ತಾವು ಹೇಳಬಹುದಾ? ನೈತಿಕವಾದ ಹಕ್ಕು ನಿಮಗೆ ಇದೆಯಾ? ಬಿ.ಐ.ಎಫ್.ಆರ್ ಆಕ್ಟ್ ಇದೆ. ಇದು ಲಿಕ್ವಿಡೇಟ್ ಆಗಿದ್ದರೆ ಅವರನ್ನು ಬರೀ ಕೈಯಲ್ಲಿ ಮನೆಗೆ ಕಳುಹಿಸುತ್ತಿದ್ದಿರಿ. ಇವರು ಅಕಸ್ಮಾತ್ ಸ್ವಲ್ಪ ನಿಮಗೆ ಅಲ್ಲಿರುವ ಫಿಕ್ಸೆಡ್ ಅಸೆಟ್ಸ್ ಮೇಲೆ ದುಡ್ಡು ಬರುತ್ತದೆ ಎಂದಾಗ ಆ ಕಂಪನಿ ಶೇರು ಹೋರ್ಡ್‌ರುಗಳಿಗೆ ನಾವು ಕೊಡುವ ಹಣ ಕೊಡುವುದಕ್ಕೆ ನಾವು ಕಾನೂನು ಮಾಡಿ 200 ರೂಪಾಯಿ ಸಿಗುವವನಿಗೆ 25 ರೂಪಾಯಿ ಕೊಡುವುದು ಏನು ಇದೆ? ಅವರಿಗೆ ಬಿಐಎಫ್‌ಆರ್ ಏನು ನಿಗದಿ ಮಾಡುತ್ತಾರೆ, ಅವರು ಲಯಬಲಿಟೀಸ್‌ನ್ನು ಡಿಸ್‌ಛಾರ್ಜ್ ಮಾಡಬೇಕಾದರೆ ಅವರ ವ್ಯಾಲ್ಯೂ ಆಫ್ ದಿ ಶೇರ್ ಏನು ಇದೆ, ಅಷ್ಟನ್ನು ಕೊಡದೇ ಹೋದರೆ ನೀವು ಸ್ಕಾಕ್ ಎಕ್ಸ್‌ಛೇಂಜ್ ಸಿಸ್ಟಂ ಅನ್ನು ಹಾಳು ಮಾಡುತ್ತೀರಿ. ಯಾರೂ ನಾಳೆ ನಿಮ್ಮ ಪಬ್ಲಿಕ್ ಕಂಪನಿಗಳ ಮೇಲೆ ಶೇರು ಹಾಕುವುದಕ್ಕೆ

ಮುಂದೆ ಬರುವುದಿಲ್ಲ. ನೀವು ಆಕ್ಟ್‌ಗಳನ್ನು ತೆಗೆದುಕೊಂಡು ಬಂದು ಶೇರ್ ಹೋಲ್ಡರ್ಸ್‌ಗಳಿಗೆ ಬರಬೇಕಾದಂತಹ ವ್ಯಾಲ್ಯೂವನ್ನು ರಿಸ್ಟ್ರಿಕ್ಟ್ ಮಾಡುವುದು ಒಂದು ದುರಂತ ಆಗುತ್ತದೆ ಎಂದು ನನ್ನ ಅಭಿಪ್ರಾಯ. ತಾವೇ ತಮ್ಮ ಭಾಷಣದಲ್ಲಿ ಹೇಳಿ ಬಿಟ್ಟಿದ್ದೀರಿ. 205 ರೂಪಾಯಿ ವ್ಯಾಲ್ಯೂ ಆಗುತ್ತದೆ, 25 ಕೊಡುತ್ತೇವೆಂದು ಹೇಳಿದಿರಿ. ತಾವೇ ಇನ್ನೊಂದು ಕಡೆ ಹೇಳುತ್ತೀರಿ, ಫಿಕ್ಸ್ ಅಸೆಟ್ ಮೇಲೆ ನಮಗೆ ಸ್ವಲ್ಪ ವ್ಯಾಲ್ಯೂ ಬಂದಿರುವುದರಿಂದ ನಮ್ಮ ಶೇರ್‌ಗಳಿಗೆ ಮಾರ್ಕೆಟ್‌ನಲ್ಲಿ ಸ್ವಲ್ಪ ಹೈಕ್ ಆಗಿದೆ, ಬೆಲೆ ಜಾಸ್ತಿ ಆಗುತ್ತಿದೆ ಎಂದು ಹೇಳಿದ್ದೀರಿ. ಒಂದು ಕಂಪನಿ ಲಿಕ್ವಿಡೇಟ್ ಮಾಡಬೇಕಾದರೆ ಮರ್ಜ್ ಮಾಡಬೇಕಾದರೆ ದಯಮಾಡಿ ಯಾರು ಶೇರ್ ಹೋಲ್ಡರ್ಸ್ ಇದ್ದಾರೆ, ಅವರುಗಳು ಕಂಪನಿಯ ಬಿಲ್ಡರ್ಸ್, ಅಕಸ್ಮಾತ್, ನಡೆಯಲಿಲ್ಲ ಎಂದರೆ ಅವರಿಗೆ ಕೊಡಬೇಕಾಗಿರುವ ಅಮೌಂಟನ್ನು ಧರ್ಮವಾಗಿ ಕೊಡುವುದು ಸರಿಯಾದುದು. ಮೈಸೂರು ಅರಮನೆ ಒಂದನ್ನು ಕಾನೂನು ತಂದು ಸರ್ಕಾರೀ ಸುಪರ್ದಿಗೆ ತೆಗೆದುಕೊಂಡೆವು ಅಂದರೆ ರಾಜ್ಯದಲ್ಲಿರುವ ಶೇರ್ ಹೋಲ್ಡರ್ಸ್ ದುಡ್ಡನ್ನೆಲ್ಲಾ ನೀವು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಹೊರಟು ಬಿಟ್ಟರೆ ಅದೇನೂ ಗೌರವವಾದಂತಹ ಎನಾಕ್ಟ್‌ಮೆಂಟ್ ಎಂದು ಅನ್ನಿಸುವುದಿಲ್ಲ. ಇದರಲ್ಲಿ ಮರ್ಜ್ ಮಾಡುವ ಪ್ರಶ್ನೆ ಇಲ್ಲ. 1708 ಜನಕ್ಕೆ ಕೊಡಬೇಕಾಗಿರುವ 205ರೂ. ಬದಲು 25 ರೂ. ಕೊಡುತ್ತೇವೆಂದು ಹೇಳುವುದಕ್ಕೆ ಒಂದು ಆಕ್ಟ್ ತಂದಿದ್ದಾರೆ. ಬೈರೇಗೌಡರು ಸ್ವಲ್ಪ ಇದನ್ನು ನೋಡಬೇಕು, ಏಕೆಂದರೆ ಶೇರ್ ಹೋಲ್ಡರ್ಸ್ ಅವರು ದುಡ್ಡು ಹಾಕಿರುತ್ತಾರೆ.

ಶ್ರೀ ಜಿ.ಟಿ. ದೇವೇಗೌಡ (ಹುಣಸೂರು) : ಮಾನ್ಯ ಅಧ್ಯಕ್ಷರೆ, ಈ ಹೊಗೆಸೊಪ್ಪಿನ ಬಗ್ಗೆ ಹೇಳುವುದಾದರೆ ತುಂಬಾ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಸುಮಾರು 20 ಸಾವಿರ ರೈತ ಬೆಳೆಗಾರರು ಇವತ್ತು ಕಷ್ಟದಲ್ಲಿದ್ದಾರೆ. ಮಾನ್ಯ ಮಂತ್ರಿಗಳು ಇವತ್ತು ಕೇಂದ್ರ ಸರ್ಕಾರದ ಒತ್ತಡಕ್ಕೆ ತಂದಿದ್ದೇವೆಂದರು. ಅವರು ಕೇಂದ್ರ ಸರ್ಕಾರದ ಬಗ್ಗೆ ಒತ್ತಡ ತಂದಿದ್ದಾರೆ. ನಿನ್ನೆಗೇ ಚೇರ್‌ಮೆನ್ ಅವರ ಅವಧಿಯನ್ನು ಮುಕ್ತಾಯ ಮಾಡಿದ್ದೇವೆಂದು ಹೇಳಿದ್ದಾರೆ. ಆದರೂ ಕೂಡ ಒಂದು ತಿಂಗಳು ಎಕ್ಸ್‌ಟೆಂಡ್ ಮಾಡಬೇಕು ಎಂದು ಹೇಳಿ ಪತ್ರ ಬರೆದಿದ್ದಾರೆ. ಮಾತನಾಡಿದ್ದಾರೆ. ಆದರೂ ಕೂಡ ಇವತ್ತು ಏನು ಆಗಿದೆ ಎಂದರೆ ಖರೀದಿದಾರರು ಎಲ್ಲರೂ ಕೂಡ ಖರೀದಿ ಮಾಡುವುದಕ್ಕೆ ತಯಾರಾಗಿದ್ದಾರೆ. ರೇಟನ್ನು ಕೊಡಿಸಲಿಕ್ಕೆ ಸಾಧ್ಯ ಇಲ್ಲ. ಈಗೇನು ರೇಟ್ 40ರೂಪಾಯಿ 50 ರೂಪಾಯಿ ನಡೆಯುತ್ತಿದೆ ಹಿಂದೆ 90, 100 ರೂ. ಇತ್ತು. 40 ರೂಪಾಯಿ 50 ರೂಪಾಯಿ ಕೇಜಿ ನಡೆಯುತ್ತಿದೆ. 20 ಸಾವಿರ ರೈತರು, 20 ಸಾವಿರ ಮಿಲಿಯನ್ ಕೇಜಿ ಇದೆ. ಖರೀದಿದಾರರು ಇವತ್ತು ಆಂಧ್ರಪ್ರದೇಶಕ್ಕೆ ಹೊರಟು ಹೋಗಿ ಬಿಟ್ಟರೆ ಅವರು ಮತ್ತೆ ಬರಲಿಕ್ಕೆ ಸಾಧ್ಯ ಇಲ್ಲ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಕೃಷಿ ಸಚಿವರು ಈ ಬಗ್ಗೆ ತುರ್ತಾಗಿ ಗಮನ ಹರಿಸಿ 20 ಸಾವಿರ ರೈತರು ಬೆಳೆದಿರತಕ್ಕಂಥಹ ಹೊಗೆಸೊಪ್ಪನ್ನು ಖರೀದಿ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೈಮುಗಿದು ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ. ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. ಆ ಪ್ರಯತ್ನದಲ್ಲಿಯೇ ಇದ್ದೇವೆ.

ಅಧ್ಯಕ್ಷರು : ಮಾಧುಸ್ವಾಮಿಯವರು ವ್ಯಾಲಿಡ್ ಪಾಯಿಂಟನ್ನು ಎತ್ತಿದ್ದಾರೆ.

ಶ್ರೀ. ಸಿ. ಬೈರೇಗೌಡ : ನಮ್ಮ ಪ್ರಯತ್ನದಿಂದಲೇ ನಿನ್ನೆಯೇ ಮುಕ್ತಾಯ ಆಗಬೇಕಾಗಿದ್ದ ಹರಾಜು ಕಟ್ಟೆ 15 ದಿವಸ ಅವಧಿಯನ್ನು ವಿಸ್ತಾರ ಮಾಡಿರತಕ್ಕದ್ದು. ಮಾನ್ಯ ಮಾಧುಸ್ವಾಮಿಯವರು ಹೇಳಿರತಕ್ಕ ವಿಚಾರದಲ್ಲಿ, ಇದು 1975ರಿಂದ ವಹಿವಾಟು ಮಾಡುತ್ತಿಲ್ಲ. 1975 ರಿಂದ ವಹಿವಾಟು ಮಾಡದೇ ಇರತಕ್ಕದ್ದು, ಈಗ ಬೆಲೆ ಏಕೆ ಹೆಚ್ಚಾಯಿತು ಎಂದರೆ ಇದು ಅರ್ಬನ್ ಪ್ರಾಪರ್ಟಿಗೆ ವ್ಯಾಲ್ಯೂ ಅಪೀಷಿಯೇಟ್ ಆಗಿರುವ ಕಾರಣದಿಂದ, ಮಾತ್ರ ಆಗಿದೆಯೇ ವಿನಹ ಇದಕ್ಕೆ ಶೇರ್ ಹೋಲ್ಡರ್ಸ್ ಕಾಂಟ್ರಿಬ್ಯೂಷನ್‌ನಿಂದ ಏನೂ ಕೂಡ ವ್ಯಾಲ್ಯೂ ಅಪೀಷಿಯೇಟ್ ಆಗಿಲ್ಲ. ಆಮೇಲೆ ಶೇರ್ ಹೋಲ್ಡರ್ಸ್ ಅವರ ಪ್ರಭಾವ ಇದರಲ್ಲಿ ಏನೂ ಇಲ್ಲ.

ಅಧ್ಯಕ್ಷರು : 25 ರೂಪಾಯಿ ಏನು ಆಕ್ಚುಯಲ್ ಆಗಿ ಫಿಕ್ಸ್ ಮಾಡಿದ್ದೀರಿ, ಇದು ಶೇರ್ ವರ್ತ್ 25 ರೂಪಾಯಿ ಮಾತ್ರನಾ ?

ಶ್ರೀ. ಸಿ. ಬೈರೇಗೌಡ : 10 ರೂಪಾಯಿಗೆ 25 ರೂಪಾಯಿ ಕೊಡುತ್ತಿದ್ದೇವೆ.

ಶ್ರೀ. ಜೆ. ಸಿ. ಮಾಧುಸ್ವಾಮಿ : ಇವರೇ ವ್ಯಾಲುಯೇಷನ್ ಮಾಡಿದ್ದಾರೆ. ಇವರೇ ಬಿಐಎಫ್‌ಆರ್ ಮುಂದೆ ಇಟ್ಟಿದ್ದಾರೆ.

ಶ್ರೀ. ಸಿ. ಬೈರೇಗೌಡ : ಯಾವಾಗ ಬಿಐಎಫ್‌ಆರ್ ಮುಂದೆ ಹೋಗುತ್ತದೆ ಎಂದರೆ ಟೋಟಲ್ ಅಸೆಟ್ಸ್ ಎಲ್ಲಾ ಸೇರಿ ಮೈನಸ್ ಆದಾಗ ಅಂದರೆ ಲಯಬಲಿಟೀಸ್ ಜಾಸ್ತಿ ಆದಾಗ ಇದು ಬಿಐಎಫ್‌ಆರ್ ಮುಂದೆ ಹೋಗುತ್ತದೆ. ಇದು ನೆಗೆಟೀವ್ ಆಗಿ ಏನೂ ಇಲ್ಲ. ಇದು ಪ್ಲಸ್ ಆಗಿಯೇ ಇದೆ. ಅದರಿಂದ ಇದು ಬಿಐಎಫ್‌ಆರ್ ಮುಂದೆ ಹೋಗುವುದಿಲ್ಲ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಮೈಸೂರು ತಂಬಾಕು ಕಂಪನಿ (ಷೇರುಗಳ ಅರ್ಜನೆ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2ರಿಂದ 19ರವರೆಗೆ

ಅಧ್ಯಕ್ಷರು : "ಖಂಡ 2ರಿಂದ 19ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಪ್ರಸ್ತಾವದ ಅಂಗೀಕಾರ

ಶ್ರೀ. ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಮೈಸೂರು ತಂಬಾಕು ಕಂಪನಿ (ಷೇರುಗಳ ಅರ್ಜನೆ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಮೈಸೂರು ತಂಬಾಕು ಕಂಪನಿ (ಷೇರುಗಳ ಅರ್ಜನೆ)ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಅಂಗೀಕರಿಸಲಾಯಿತು)

(ಆ) ಕರ್ನಾಟಕ ಶರೀರ ರಚನಾ ಶಾಸ್ತ್ರ (ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

ಡಾ. ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿ ಇರುವ 1998ನೇ ಸಾಲಿನ ಕರ್ನಾಟಕ ಶರೀರ ರಚನಾ ಶಾಸ್ತ್ರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಡಾ. ಎಂ. ಶಂಕರ್ ನಾಯಕ್ : ಯಾವುದೇ ಒಬ್ಬ ವ್ಯಕ್ತಿ ತನ್ನ ಮರಣಕ್ಕೆ ಮೊದಲು ತನ್ನ ಶರೀರವನ್ನು ಅಥವಾ ಶರೀರದ ಯಾವುದೇ ಭಾಗವನ್ನು ಶರೀರ ರಚನಾ ಪರೀಕ್ಷೆ ಅಥವಾ ಅಂಗಛೇದನ ಉದ್ದೇಶಕ್ಕಾಗಿ ಅಥವಾ ಅದೇ ರೀತಿಯ ಇತರ ಉದ್ದೇಶಕ್ಕಾಗಿ ದಾನ ಮಾಡುವ ಉದ್ದೇಶವನ್ನು ಎರಡು ಅಥವಾ ಹೆಚ್ಚು ವ್ಯಕ್ತಿಗಳ ಸಮ್ಮುಖದಲ್ಲಿ ಬರಹ ಮೂಲಕ ವ್ಯಕ್ತಪಡಿಸಲು ಅನುವು ಮಾಡಿಕೊಡಲು ಅವಕಾಶ ಕಲ್ಪಿಸುವುದಕ್ಕಾಗಿ ಈ ರಚನೆ. ಈ ವಿಧೇಯಕವನ್ನು ಅದಕ್ಕಾಗಿ ಮಂಡಿಸಲಾಗಿದೆ. ಹಿಂದೆ ಯಾವುದೇ ವ್ಯಕ್ತಿ ತನ್ನ ಬಾಡಿಯನ್ನು ಡೊನೇಟ್ ಮಾಡಬೇಕಾದರೆ ಯಾವುದಾದರೂ ಅನಾಟಮಿಕಲ್ ಡಿಸೆಕ್ಷನ್ ಅಥವಾ ಬೇರೆ ವಿಚಾರದಲ್ಲಿ ಅವರು ಏನಾದರೂ ಸ್ವಇಚ್ಛೆಯಿಂದ ಬರೆದುಕೊಟ್ಟಿದ್ದರೆ ಅಂತಹವರು ಡೊನೇಟ್ ಮಾಡಬೇಕಾಗಿತ್ತು.

ಶ್ರೀ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಯೇ ಈ ಪ್ರಸ್ತಾವವನ್ನು ತಂದಿದ್ದೀರಾ? ಏಕೆಂದರೆ ಶರೀರದ ಯಾವುದೋ ಭಾಗ ತೆಗೆದುಕೊಳ್ಳಬೇಕು, ಕೊಡಬೇಕು ಎಂದು ಹೇಳಿದ್ದೀರಲ್ಲಾ, ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಂಡೇ ತಂದಿರೋ ಹೇಗೆ ಎಂದು ಕೇಳುತ್ತಿದ್ದೇನೆ.

ಡಾ. ಎಂ. ಶಂಕರ್ ನಾಯಕ್ : ಅದು ಸ್ವಇಚ್ಛೆಯಿಂದ ಬರೆದುಕೊಡತಕ್ಕದ್ದು. ಶರೀರದ ಯಾವುದೇ ಭಾಗ ಅಥವಾ ಶರೀರವನ್ನು ಡೊನೇಟ್ ಮಾಡತಕ್ಕದ್ದು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ